# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯದ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳಲ್ಲಿ 2024-25ನೇ ಹಂಗಾಮಿನಲ್ಲಿ ಕಬ್ಬು ಅರೆಯುವ ದಿನಾಂಕವನ್ನು ಮರು ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ :**

1. ಸರ್ಕಾರದ ಆದೇಶ ಸಂಖ್ಯೆ: ಸಿಐ 233 ಎಸ್ ಜಿಎಫ್ 2024, ದಿನಾಂಕ:13.09.2024
2. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಸಿಸ್ಕಾ/2024-25, ದಿನಾಂಕ:30.10.2024.
3. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಹಾವೇರಿ ಇವರ ಪತ್ರ ಸಂಖ್ಯೆ: ಆನಾಸ/ಲೆ.ಶಾ/ವಹಿ/2024-25, ದಿನಾಂಕ:04.11.2024

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ, ಉಪಾಧ್ಯಕ್ಷರು, ಸಿಸ್ಕಾ, ಕರ್ನಾಟಕ ಇವರ ದಿನಾಂಕ:07.08.2024ರ ಮನವಿ ಮತ್ತು ದಿನಾಂಕ:07.08.2024ರಂದು ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಅಧ್ಯಕ್ಷತೆಯಲ್ಲಿ ರಾಜ್ಯದ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಒಕ್ಕೂಟ ಕರ್ನಾಟಕ ಇದರ ಪದಾಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ತೀರ್ಮಾನದನ್ವಯ ಮತ್ತು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ:ಡಿಎಸ್‌ಕೆ/ಎಸ್‌ಕೆ/ಸಿಸ್ಕಾ/2024-25/897, ದಿನಾಂಕ:13.08.2024ರಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ವಯ "ರಾಜ್ಯದ ರೈತರ ಮತ್ತು ಸಕ್ಕರೆ ಕಾರ್ಖಾನೆಗಳ ಹಿತದೃಷ್ಟಿಯಿಂದ ರಾಜ್ಯದ ಉತ್ತರ ಭಾಗದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ಕಡ್ಡಾಯವಾಗಿ 2024ನೇ ಸಾಲಿನ ನವೆಂಬರ್-15ರ ನಂತರ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆದೇಶಿಸಿದೆ. ಈ ಆದೇಶವನ್ನು ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಈ ಆದೇಶವನ್ನು ಉಲ್ಲಂಘಿಸಿದ ಸಕ್ಕರೆ ಕಾರ್ಖಾನೆಗಳ ಕುರಿತು ಮಾಹಿತಿಯನ್ನು ಅಗತ್ಯ ದಾಖಲೆಗಳೊಂದಿಗೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಸರ್ಕಾರಕ್ಕೆ ವರದಿ ಮಾಡುವುದು" ಎಂದು ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಐ 233 ಎಸ್ ಜಿಎಫ್ 2024, ದಿನಾಂಕ:13.09.2024 ಅನ್ನು ಪ್ರಶ್ನಿಸಿ ರಾಜ್ಯದ ಉತ್ತರ ಭಾಗದ ಕೆಲವು ಸಕ್ಕರೆ ಕಾರ್ಖಾನೆಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ದಾಖಲಿಸಿ ತಡೆಯಾಜ್ಞೆ ಪಡೆದು ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿರುತ್ತವೆ. ಇದರಿಂದಾಗಿ, ಉಳಿದ ಕಾರ್ಖಾನೆಗಳಿಗೆ ತೊಂದರೆಯಾಗಿರುತ್ತದೆ. ಇದಲ್ಲದೆ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿರುವ ಕಾರ್ಖಾನೆಗಳು ಅನಧಿಕೃತವಾಗಿ ಬೇರೆ ಕಾರ್ಖಾನೆಗಳ ವ್ಯಾಪ್ತಿಯಲ್ಲಿ ಬೆಳೆದಿರುವ ಕಬ್ಬನ್ನು ಅಕ್ರಮವಾಗಿ ಪರಭಾರೆ ಮಾಡುತ್ತಿರುವುದರಿಂದ ಕಬ್ಬು ಬೆಳೆಗಾರರಿಗೆ ಕಬ್ಬು ಕಟಾವು ಮತ್ತು ಸಾಗಾಣಿಕ ವೆಚ್ಚವು ಹೆಚ್ಚಳವಾಗುತ್ತದೆ. ಇದರಿಂದಾಗಿ ರೈತರಿಗೆ ಮತ್ತು ಕಾರ್ಖಾನೆಗಳಿಗೆ ಆರ್ಥಿಕ ನಷ್ಟವುಂಟಾಗುತ್ತದೆ. ಅಲ್ಲದೆ ಉತ್ತರ ಭಾಗದ ಕೆಲವು ಭಾಗಗಳಲ್ಲಿ ಜುಲೈ-2023 ನೇ ಮಾಹೆಯಿಂದ ಕಬ್ಬು ನಾಟಿ ಮಾಡಿರುವುದರಿಂದ ಸದರಿ ಪ್ರದೇಶಗಳಲ್ಲಿ ಕಬ್ಬು ಪಕ್ವವಾಗಿರುವ ಕಾರಣ ಅಂತಹ ರೈತರು ಕಬ್ಬು ಕಟಾವು ಮಾಡುವಂತೆ ಒತ್ತಾಯಿಸುತ್ತಿರುವುದರಿಂದ, ರಾಜ್ಯದ ಕಬ್ಬು ಬೆಳೆಗಾರ ರೈತರ ಹಾಗೂ ಸಕ್ಕರೆ ಕಾರ್ಖಾನೆಗಳ ಹಿತದೃಷ್ಟಿಯಿಂದ ರಾಜ್ಯದ ಉತ್ತರ ಭಾಗದ ಸಕ್ಕರೆ ಕಾರ್ಖಾನೆಗಳು 2024-25 ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ನವೆಂಬರ್-15 ರ ನಂತರ ಪ್ರಾರಂಭಿಸಬೇಕು ಎಂಬ ದಿನಾಂಕ:13.09.2024ರ ಸರ್ಕಾರದ ಆದೇಶವನ್ನು ಮಾರ್ಪಡಿಸಿ ಸದರಿ ಹಂಗಾಮಿನ ದಿನಾಂಕವನ್ನು ಹಿಂದೂಡುವ ಬಗ್ಗೆ ಸರ್ಕಾರದ ಹಂತದಲ್ಲಿ ಆದೇಶ ಹೊರಡಿಸುವಂತೆ ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಸಂಗೂರು ಸಕ್ಕರೆ ಕಾರ್ಖಾನೆ ವ್ಯಾಪ್ತಿಯ ರೈತರು ಮನವಿಯನ್ನು ಸಲ್ಲಿಸಿ ಈ ವರ್ಷ ಹೆಚ್ಚಿನ ಪ್ರಮಾಣದ ಮಳೆಯಿಂದ ಕಬ್ಬು ಬೆಳೆ ಉತ್ಕೃಷ್ಟವಾಗಿ ಬೆಳೆದಿದ್ದು, ಮಳೆಗಾಲದ ನಂತರ ವಿದ್ಯುತ್ ಅಭಾವದಿಂದ ಬೋರ್‌ವೆಲ್‌ಗಳಿಂದ ನೀರಿನ ಪೂರೈಕೆ ಸಮರ್ಪಕವಾಗಿ ಮಾಡಲು ಸಾಧ್ಯವಾಗುವುದಿಲ್ಲವೆಂದು ಮತ್ತು ಇದರಿಂದ ಬೆಳೆ ಒಣಗುವ ಸಾಧ್ಯತೆ ಇದ್ದು, ಕಬ್ಬಿನ ಇಳುವರಿ ಕಡಿಮೆಯಾಗುತ್ತದೆ ಹಾಗೂ ಕಬ್ಬು ಕಟಾವು ಮಾಡುವ ಕೂಲಿಗಳು ಮಹಾರಾಷ್ಟ್ರ ರಾಜ್ಯದಿಂದ ಬರುವವರಿದ್ದು, ಹಂಗಾಮು ವಿಳಂಬವಾಗಿ ಪ್ರಾರಂಭಿಸಿದಲ್ಲಿ ಕಬ್ಬು ಕಟಾವು ಮಾಡುವ ಕೂಲಿಗಳು ಲಭ್ಯತೆಯಾಗದೇ ಹೆಚ್ಚಿನ ದರ ನೀಡಿ ಸ್ಥಳೀಯ ಕೂಲಿಗಳಿಂದ ಕಟಾವು ಪ್ರಾರಂಭಿಸಿದಲ್ಲಿ ಕಬ್ಬು ಬೆಳೆಗಾರರಿಗೆ ನಷ್ಟವಾಗುತ್ತದೆ. ಸರ್ಕಾರದ ಆದೇಶದ ಪ್ರಕಾರ ನವಂಬರ್ -15ರ ತನಕ ಕಬ್ಬು ಕಟಾವು ಪ್ರಾರಂಭ ಮಾಡದೇ

....2

ಹೋದರೆ ಒಂದು ಎಕರೆಗೆ 50 ರಿಂದ 60 ಟನ್ ಬರುವ ಬದಲು ಕೇವಲ 25 ರಿಂದ 30 ಟನ್ ಬರುವ ಸಾಧ್ಯತೆ ಇರುತ್ತದೆ. ವಾಡಿಕೆಯಂತೆ ಅಕ್ಟೋಬರ್ ಅಂತ್ಯದೊಳಗಡೆ ಕಾರ್ಖಾನೆ ಪ್ರಾರಂಭಿಸಲು ಅನುಮತಿಸಬೇಕೆಂದು ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸುತ್ತಾ, ರೈತರ ಹಿತದೃಷ್ಟಿಯಿಂದ ಕಬ್ಬು ಕಟಾವು ಹಂಗಾಮನ್ನು ಕೂಡಲೇ ಆರಂಭಿಸಲು ಅನುಮತಿ ನೀಡಬೇಕಾಗಿ ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಹಾವೇರಿ ಇವರು ಕೋರಿರುತ್ತಾರೆ.

ಆದ್ದರಿಂದ, ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ಸರ್ಕಾರದ ಆದೇಶ ಸಂಖ್ಯೆ:ಸಿಐ 233 ಎಸ್‌ಜಿಎಫ್ 2024, ದಿನಾಂಕ:13.09.2024 ಅನ್ನು ಮಾರ್ಪಡಿಸಿ, 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ಹಿಂದೂಡಲು ಕ್ರಮ ಕೈಗೊಳ್ಳುವುದು ಅಗತ್ಯವೆಂದು ಪರಿಗಣಿಸಿ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 233 ಎಸ್‌ಜಿಎಫ್ 2024,**
**ಬೆಂಗಳೂರು, ದಿನಾಂಕ: 5ನೇ ನವೆಂಬರ್ 2024**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಿಐ 233 ಎಸ್ ಜಿಎಫ್ 2024, ದಿನಾಂಕ:13.09.2024ರಲ್ಲಿ "ರಾಜ್ಯದ ಉತ್ತರ ಭಾಗದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು ಕಡ್ಡಾಯವಾಗಿ 2024 ನೇ ಸಾಲಿನ ನವೆಂಬರ್-15ರ ನಂತರ ಪ್ರಾರಂಭಿಸಲು ಆದೇಶಿಸಿರುವುದನ್ನು ಮಾರ್ಪಡಿಸಿ "ಕಬ್ಬು ಬೆಳೆಯುವ ರೈತರ ಮತ್ತು ಸಕ್ಕರೆ ಕಾರ್ಖಾನೆಗಳ ಹಿತದೃಷ್ಟಿಯನ್ನು ಪರಿಗಣಿಸಿ, ರಾಜ್ಯದ ಉತ್ತರ ಭಾಗದ ಎಲ್ಲಾ ಸಕ್ಕರೆ ಕಾರ್ಖಾನೆಗಳು 2024-25ನೇ ಸಾಲಿನ ಕಬ್ಬು ಅರೆಯುವ ಹಂಗಾಮನ್ನು 2024ನೇ ಸಾಲಿನ ನವೆಂಬರ್-8 ರಿಂದ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಶಾಂತಾರಾಮ)**
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಕ್ಕರೆ)

**ಇವರಿಗೆ:**

1. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿಟಿಎಸ್ ನಂ.4125/1ಬಿ, ಗಣೇಶಪೂರ ರಸ್ತೆ, ಲಕ್ಷ್ಮಿಟೇಕ್, ಬೆಳಗಾವಿ-590009
2. ನಿರ್ದೇಶಕರು, ಎಸ್.ನಿಜಲಿಂಗಪ್ಪ ಸಕ್ಕರೆ ಸಂಸ್ಥೆ, ಸಿಟಿಎಸ್ ನಂ.4125/1ಬಿ, ಗಣೇಶಪೂರ ರಸ್ತೆ, ಲಕ್ಷ್ಮಿಟೇಕ್, ಬೆಳಗಾವಿ-590009
3. ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ / ಕಲಬುರಗಿ ಜಿಲ್ಲೆ / ಯಾದಗಿರಿ ಜಿಲ್ಲೆ / ಬಳ್ಳಾರಿ ಜಿಲ್ಲೆ / ವಿಜಯನಗರ ಜಿಲ್ಲೆ / ಹಾವೇರಿ ಜಿಲ್ಲೆ / ಧಾರವಾಡ ಜಿಲ್ಲೆ/ಉತ್ತರ ಕನ್ನಡ ಜಿಲ್ಲೆ / ಬೆಳಗಾವಿ ಜಿಲ್ಲೆ/ ವಿಜಯಪುರ ಜಿಲ್ಲೆ / ಬಾಗಲಕೋಟೆ ಜಿಲ್ಲೆ / ಗದಗ ಜಿಲ್ಲೆ
4. ಕಾರ್ಯದರ್ಶಿ, ದಿ ಸೌತ್ ಇಂಡಿಯನ್ ಶುಗರ್ ಮಿಲ್ಸ್ ಅಸೋಸಿಯೇಷನ್- ಕರ್ನಾಟಕ, ಫರ್ಹಾ ವಿನ್ಸ್ ಫೋರ್ಡ್, 1ನೇ ಮಹಡಿ, 133/6, ಇನ್ಫೆಂಟ್ರಿ ರಸ್ತೆ ಬೆಂಗಳೂರು-560001
5. ಬೀದರ್ ಜಿಲ್ಲೆ / ಕಲಬುರಗಿ ಜಿಲ್ಲೆ/ ಯಾದಗಿರಿ ಜಿಲ್ಲೆ/ಬಳ್ಳಾರಿ ಜಿಲ್ಲೆ / ವಿಜಯನಗರ ಜಿಲ್ಲೆ / ಹಾವೇರಿ ಜಿಲ್ಲೆ / ಧಾರವಾಡ ಜಿಲ್ಲೆ/ಉತ್ತರ ಕನ್ನಡ ಜಿಲ್ಲೆ / ಬೆಳಗಾವಿ ಜಿಲ್ಲೆ/ ವಿಜಯಪುರ ಜಿಲ್ಲೆ / ಬಾಗಲಕೋಟೆ ಜಿಲ್ಲೆ / ಗದಗ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳು
6. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು
7. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು ವಿಕಾಸಸೌಧ ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿ (ಎಂಎಸ್ಎಂಇ ಮತ್ತು ಗಣಿ)ಯವರ ಆಪ್ತ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿ (ಸಕ್ಕರೆ)ಯವರ ಪತ್ರಾಂಕಿತ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು